**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017 ಪ್ರಾ.ಸಾ.24**

**ಬಾ.ಸಾ.31**

| | | |
|---|---|---|
| ಸಾಕ್ಷಿದಾರರ ಹೆಸರು | - | ಸುರೇಶ ಪೂಜಾರಿ |
| ತಂದೆಯ ಹೆಸರು | - | ಸಿದ್ದು ಪೂಜಾರಿ |
| ವಯಸ್ಸು | - | 52 ವರ್ಷ |
| ಉದ್ಯೋಗ | - | ಕೃಷಿ |
| ವಿಳಾಸ | - | ಕಾಜಾರಗುತ್ತು, ಹಿರಿಯಡ್ಕ. |

ದಿನಾಂಕಃ 06-12-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಎರಡನೇ ಆರೋಪಿಯ ಪರಿಚಯ ಇಲ್ಲ. ಮೃತನ ಪರಿಚಯ ಇಲ್ಲ. ಸುಮಾರು 7 ವರ್ಷಗಳ ಹಿಂದೆ ಪೋಲಿಸರು ಎರಡು ದಾಖಲೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನನಗೆ ತಿಳಿದಿರುವುದಿಲ್ಲ. ಈಗ ತೋರಿಸಿದ ನಿಪಿ-56 ಮತ್ತು 58 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-56(ಬಿ) ಮತ್ತು 58(ಬಿ) ಎಂದು ಗುರುತಿಸಲಾಯಿತು. ಎರಡನೇ ಆರೋಪಿ ಕೊಟ್ಟ ಸ್ವ ಇಚ್ಛಾ ಹೇಳಿಕೆಯಂತೆ ಪೋಲಿಸರು ಸ್ಥಳವನ್ನು ಪರಿಶೀಲಿಸಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದ**

1. ದಿನಾಂಕ 14-01-2017 ರಂದು ಪೋಲಿಸರು ನನ್ನ ಹಾಗೂ ಸಹ ಪಂಚರ ಸಮಕ್ಷಮದಲ್ಲಿ 2 ನೇ ಆರೋಪಿ ಕೊಟ್ಟ ಸ್ವ ಇಚ್ಛಾ ಹೇಳಿಕೆಯಂತೆ ದನದ ಕರುವನ್ನು ಸುಡಲು ಉಪಯೋಗಿಸಿದ ಕಟ್ಟಿಗೆಯನ್ನು ತೆಗೆದುಕೊಂಡು ಹೋದ ಸ್ಥಳವನ್ನು ತೋರಿಸಿದ್ದು ಸದ್ರಿ ಸ್ಥಳವು ವರ್ವಾಡಿ ಎಂಬಲ್ಲಿರುವ ವಾಸುದೇವ ನಾಯ್ಕರವರ ಕುಂಮ್ಕಿ ಸ್ಥಳವಾಗಿದ್ದು ಸದ್ರಿ ಸ್ಥಳವನ್ನು ಪೋಲಿಸರು ನಿಪಿ-56 ರಂತೆ ಪರಿಶೀಲಿಸಿ ಸ್ಥಳದಲ್ಲಿ ಮಹಜರು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-57 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

2. ದಿನಾಂಕ 14-01-2017 ರಂದು ಎರಡನೇ ಆರೋಪಿ ಕೊಟ್ಟ ಸ್ವ ಇಚ್ಛಾ ಹೇಳಿಕೆಯಂತೆ ತನಿಖೆಯ ದಿಕ್ಕು ತಪ್ಪಿಸಲು ದನದ ಕರುವನ್ನು ಸುಟ್ಟ ಸ್ಥಳವನ್ನು ಎರಡನೇ ಆರೋಪಿ ತೋರಿಸಿದ್ಧು, ಸದ್ರಿ ಸ್ಥಳವು ಪೆರ್ಣಂಕಿಲ ಗ್ರಾಮದ ಮೂಡುಗುಡ್ಡದಬೆಟ್ಟು ಎಂಬಲ್ಲಿರುವ ಸ್ಥಳವಾಗಿದ್ದು, ಸದ್ರಿ ಸ್ಥಳವನ್ನು ಪರಿಶೀಲಿಸಿ ಪೋಲಿಸರು ನಿಪಿ-58 ರಂತೆ ಮಹಜರು ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-59 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.